ಕಾಲಮಿತಿ ಮುಗಿದುಹೋಗಿದೆ, ಆಗಸ್ಟ್ ತಿಂಗಳ 6ನೇ ತಾರೀಖು ಟೆಂಡರ್‌ಗಳನ್ನು ಒಡೆದು ನೋಡುತ್ತೇವೆ, ಅಕ್ಟೋಬರ್ 2ನೇ ತಾರೀಖು ಗಾಂಧಿ ಜಯಂತಿ ದಿವಸ ಶ್ರೀಮಾನ್ ಶಿವಾನಂತ ಪಾಟೀಲರ ಅಮೃತ ಹಸ್ತದಿಂದಲೇ ಆ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಯೋಜನೆಗಳು ಕಾಲಮಿತಿಯೊಳಗೆ ಮುಗಿಯಬೇಕಾಗುತ್ತದೆ. ಟೆಂಡರ ಕರೆದು ಕೆಲಸ ಮಾಡಿಸುವುದರಿಂದ ಕೆಲಸಗಳು ಡಿಲೇ ಆಗುವುದರಿಂದ ಅದರ ಬದಲಾಗಿ ಇಲಾಖೆ ವತಿಯಿಂದಲೇ ಏಕೆ ಕೆಲಸ ಮಾಡಿಸಬಾರದು?

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಕೆಲಸಗಳಲ್ಲಿ ಅನುಭವವಿರುವ ಪ್ರೀಕ್ವಾಲಿಫೈಡ್ ಗುತ್ತಿಗೆದಾರರಿಂದ ಮಾತ್ರ ಈ ಕೆಲಸ ಮಾಡಿಸಬೇಕೆಂದು ವರ್ಲ್ಡ್ ಬ್ಯಾಂಕ್ ಯೋಜನೆಯಲ್ಲಿ ಷರತ್ತುಗಳಿವೆ. ಇಂಥಾ ಕೆಲಸಗಳಿಗೆ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲು ನಿಧಾನವಾಗುತ್ತದೆ ಎನ್ನುವ ಕಾರಣಕ್ಕಾಗಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಎಂಪವರ್ ಕಮಿಟಿ ಮಾಡಲಾಗಿದೆ. ಟೆಂಡರನ್ನು ಯಾವ ರೀತಿ ಕರೆಯಬೇಕೆಂಬ ಬಗ್ಗೆ ಚರ್ಚೆ ಮಾಡುವುದರಲ್ಲೇ ಬಹಳ ವಿಳಂಬವಾಗಿತ್ತು. ನಮ್ಮ ಸರ್ಕಾರ ಬಂದ ನಂತರ ಈ ವಿಚಾರದಲ್ಲಿ ಚಾಲನೆ ಕೊಟ್ಟಿದ್ದೇವೆ. ಇದರ ಬಗ್ಗೆ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ವಿಷಯ:- ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಕೂಲಿ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 128 (1111)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರು-9, ವೈದ್ಯೇತರರು-26, ಇವುಗಳ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ?

ಆ) ಮಾಡಲಾಗದಿದ್ದಲ್ಲಿ ಕಾರಣಗಳೇನು?

ಇ) ಆದ್ಯತೆ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗುವುದೇ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು):-

ಅ) ಖಾಲಿ ಇರುವ ವೈದ್ಯರ ಹುದ್ದೆಗಳು-9
ಖಾಲಿ ಇರುವ ವೈದ್ಯೇತರರ ಹುದ್ದೆಗಳು-26, ಇನ್ನೂ ಭರ್ತಿ ಮಾಡಲಾಗಿಲ್ಲ.

ಆ) ವೈದ್ಯರುಗಳಿಗೆ ಕಾಲಮಿತಿ ಪದೋನ್ನತಿ ನೀಡುವ ಕಾರ್ಯ ಪ್ರಕ್ರಿಯೆಯಲ್ಲಿದ್ದ

ಕಾರಣ ತುಂಬಲಾಗಿಲ್ಲ. ವೈದ್ಯೇತರರ ಹುದ್ದೆಗಳನ್ನು ಆರ್ಥಿಕ ನಿರ್ಬಂಧದ ನಿಮಿತ್ತ ತುಂಬಲಾಗಿರಲಿಲ್ಲ.

ಇ) ವೈದ್ಯರ ಹುದ್ದೆಗಳನ್ನು ಕಾಲಮಿತಿ ಪದೋನ್ನತಿ ನೀಡುವ ಸಮಯದಲ್ಲಿ ಆದ್ಯತೆಯ ಮೇಲೆ ತುಂಬಲಾಗುವುದು ಮತ್ತು ವೈದ್ಯೇತರರ ಹುದ್ದೆಗಳನ್ನು ತುಂಬಲು ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗಿದೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೆ, ಉಡುಪಿ ಸರ್ಕಾರಿ ಆಸ್ಪತ್ರೆಯಲ್ಲಿ 100 ಹಾಸಿಗೆ ಇದ್ದು ಅದು ಜಿಲ್ಲೆಗೆ ದೊಡ್ಡ ಆಸ್ಪತ್ರೆಯಾಗಿದೆ. ಇಲ್ಲಿ 93 ಜನ ಪೇಷೆಂಟ್ಸ್ ಇದ್ದಾರೆ. ಈ ಆಸ್ಪತ್ರೆಗೆ 18 ಸ್ಯಾಂಕ್ಷನ್ಡ್ ಪೋಸ್ಟ್ ಇದ್ದರೂ ಕೇವಲ 9 ಜನ ಮಾತ್ರ ಇದ್ದಾರೆ. ಇದರ ಬಗ್ಗೆ ನಾನು ಒಂದೂವರೆ ವರ್ಷಗಳಿಂದ ಕೇಳುತ್ತಲೇ ಬಂದಿದ್ದೇನೆ. ಸ್ಯಾಂಕ್ಷನ್ಡ್ ಸರ್ಜನ್ ಪೋಸ್ಟ್ ಒಂದು ಇದೆ, ಇವತ್ತಿನವರೆಗೂ ಆ ಪೋಸ್ಟ್‌ನ್ನು ತುಂಬಿಲ್ಲ. ಸರ್ಜರಿ ವಾರ್ಡ್‌ನಲ್ಲಿ 49 ಪೇಷೆಂಟ್ಸ್ ಇದ್ದಾರೆ. ಇದರ ಜೊತೆಗೆ ಮೆಟರ್ನಿಟಿ ಆಸ್ಪತ್ರೆಯಲ್ಲಿ 56 ಬೆಡ್‌ಗಳು ಮಕ್ಕಳ ಆಸ್ಪತ್ರೆಯಲ್ಲಿ 20 ಬೆಡ್‌ಗಳಿವೆ, ಇಲ್ಲಿ ಒಬ್ಬ ಮಹಿಳಾ ವೈದ್ಯರೂ ಇಲ್ಲ. ಕಳೆದ 6 ತಿಂಗಳಿಂದ ಪೇಷೆಂಟ್ಸ್ ಅಡ್ಮಿಷನ್ ಆಗುತ್ತಿಲ್ಲ. ಆದುದರಿಂದ, ಈ ಆಸ್ಪತ್ರೆಗೆ ಮಹಿಳಾ ವೈದ್ಯರುಗಳನ್ನಾದರೂ ಅಪಾಯಿಂಟ್ ಮಾಡುವುದಕ್ಕೆ ಸರ್ಕಾರ ಗಮನಹರಿಸಬೇಕು. ಸಾರ್ವಜನಿಕ ವಂತಿಗೆಯನ್ನು ಕೂಡಿಸಿ ಇಂಥ ಆಸ್ಪತ್ರೆಗಳನ್ನು ಕಟ್ಟಿದ್ದಾಗ ಮಹಿಳಾ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಕಾಳಜಿ ಇರತಕ್ಕಂಥ ಸರ್ಕಾರ ಮಹಿಳಾ ವೈದ್ಯರನ್ನು ನೇಮಕ ಮಾಡದೇ ಇರುವುದರಿಂದ ಪೇಷೆಂಟ್ಸ್‌ಗಳನ್ನು ಹಾಗೆಯೇ ಕಳುಹಿಸಬೇಕಾಗಿದೆ ಆ ಕಾರಣಕ್ಕಾಗಿ ಈ ವಿಷಯವನ್ನು ಕೇಳುತ್ತಿದ್ದೇನೆ. ಆದುದರಿಂದ, ಈ ಆಸ್ಪತ್ರೆಗೆ ಯಾವಾಗ ಮಹಿಳಾ ವೈದ್ಯರನ್ನು ಕೊಡುತ್ತೀರಿ ಎಂದು ಕಾಲಮಿತಿ ನಿಗದಿಪಡಿಸಿ ಹೇಳುತ್ತೀರೋ?

ಶ್ರೀ ಹೆಚ್.ಸಿ.ಮಹದೇವಪ್ಪ:- ಮಾನ್ಯ ಸಭಾಧ್ಯಕ್ಷರೇ, ಈಗ ವೈದ್ಯರ ಪದೋನ್ನತಿ ಕಾರ್ಯ ನಡೆಯುತ್ತಿದೆ. ಆಗಸ್ಟ್ ತಿಂಗಳಲ್ಲಿ ಸ್ಯಾಂಕ್ಷನ್ಡ್ ಪೋಸ್ಟ್‌ನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಹೇಳಬಯಸುತ್ತೇನೆ..

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ, ಮಹಿಳಾ ವೈದ್ಯರ ಪೋಸ್ಟನ್ನು ತುಂಬಲಿಕ್ಕೆ ಇದಕ್ಕೋಸ್ಕರ ಕಾಯಬೇಕಾಗಿಲ್ಲ. ಎಕ್ಸಸ್ ಪೋಸ್ಟ್ ಇರುವ ಕಡೆಯಿಂದ ತೆಗೆದು ಈ ಆಸ್ಪತ್ರೆಗೆ ಪೋಸ್ಟಿಂಗ್ ಕೊಡಿ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಆಗಸ್ಟ್‌ನಲ್ಲಿ ಪೋಸ್ಟ್‌ಗಳನ್ನು ತುಂಬಿಕೊಡುತ್ತೇವೆಂದು ಮಾನ್ಯ ಮಂತ್ರಿಯವರು ಸದನದಲ್ಲಿ ಹೇಳಿದ್ದಾರೆ. ಆಗಸ್ಟ್‌ನಲ್ಲಿ ಆ ಕೆಲಸ ಪೂರ್ಣವಾಗದೇ ಹೋದರೆ I will have to take it very seriously. It means you are flouting the promise made in the House. ಕಂಟಿಮ್ಪ್ ಎಂದು ತೀರ್ಮಾನ ಮಾಡುತ್ತೇನೆಂದು ಈಗಲೇ ಹೇಳುತ್ತೇನೆ.

ಶ್ರೀ ಡಿ.ನಾರಾಯಣದಾಸ್:- ಮಾನ್ಯ ಅಧ್ಯಕ್ಷರೆ, ಮೊದಲು ಮದ್ರಾಸ್ ಸರ್ಕಾರ ಇದ್ದಾಗ ಏನು ಕಂಬೈನ್ಡ್ ಆಸ್ಪತ್ರೆ ಎಂದು 14-15 ಬೆಡ್ಸ್ ಇದ್ದವು? ಈಗ 50-70 ಬೆಡ್ಸ್ ಆದರೂ ಕೂಡ ಅಲ್ಲಿ ಇರುವುದು ಒಬ್ಬೇ ಒಬ್ಬ ಡಾಕ್ಟರ್. ಇನ್ನೊಬ್ಬರು ಲೇಡಿ ಡಾಕ್ಟರ್ ಕೂಡ ಇಲ್ಲ. ಪೋಸ್ಟ್ ಸ್ಯಾಂಕ್ಷನ್‌ಗೆ ಇಲ್ಲಿಗೆ ಕಳುಹಿಸಿ ಎರಡು ಮೂರು ವರ್ಷಗಳಾದರೂ ಇನ್ನೂ ಯಾರನ್ನೂ ಅಪಾಯಿಂಟೇ ಮಾಡಿಲ್ಲ. ಎಕನಾಮಿಕ್ ಕೈಸಿಸ್‌ನ್ನು ಲಿಫ್ಟ್ ಮಾಡಿ, ಯಾವಾಗ ಡಾಕ್ಟರ್‌ಗಳನ್ನು ಅಪಾಯಿಂಟ್ ಮಾಡುತ್ತೀರೆಂದು ಹೇಳಬೇಕು.

ಶ್ರೀ ಹೆಚ್.ಸಿ.ಮಹದೇವಪ್ಪ:- ಸನ್ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಹಲವಾರು ವರ್ಷಗಳಿಂದ ವೈದ್ಯರುಗಳಿಗೆ ಪ್ರಮೋಶನ್‌ನ್ನು ಕೊಟ್ಟಿಲ್ಲ. ಹಲವಾರು ವರ್ಷಗಳಿಂದ ವೈದ್ಯರುಗಳಿಗೆ ಪದೋನ್ನತಿಯನ್ನು ನೀಡಲು ಸಾಧ್ಯವಾಗಲಿಲ್ಲ. ಈಗ ಆ ಪ್ರಕ್ರಿಯೆ ಪ್ರಾರಂಭವಾಗಿದೆ. ಜೊತೆಗೆ ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡುವ ಬಗ್ಗೆ.....

ಅಧ್ಯಕ್ಷರು:- ನೀವು ಲೋಕಸೇವಾ ಆಯೋಗದಿಂದಲಾದರೂ ಭರ್ತಿ ಮಾಡಿ, ಕಂಟ್ರಾಕ್ಟ್ ಬೇಸಿಸ್‌ನ ಮೇಲಾದರೂ ಭರ್ತಿ ಮಾಡಿ. ನಿಮ್ಮ ಡಿಪಾರ್ಟ್‌ಮೆಂಟ್ ಯಾವ ತರಹದಲ್ಲಿ ಕೆಲಸ ಮಾಡುತ್ತಿದೆ ಎಂದು ನನಗ ಅರ್ಥವಾಗುತ್ತಾ ಇಲ್ಲ. ಇಂಥ ಡಾಕ್ಟರ್‌ರಿಗೆ ಕೆಲಸ ಕೊಡಿ ಎಂದರೆ ನಿಮ್ಮ ಡಿ.ಸಿ.ಗಳು ಅದಿಲ್ಲ, ಇದಿಲ್ಲ ಎಂದು ಹೇಳುತ್ತಾರೆ. ನಿಮ್ಮ ಡಿ.ಸಿ.ಯವರು ಯಾರ್ಯಾರು ಮೆರಿಟ್ ಇದ್ದವರು ಬರುತ್ತಾರೆ ಅವರಿಗೆ ಕೊಡಬೇಕೆಂದು ಹೇಳಿದರೆ ಅವರು ಬೆಂಗಳೂರಿನವರು ಮೈಸೂರಿನವರು, ಕೋಲಾರದವರು ಇರುತ್ತಾರೆ. ಅವರ್ಯಾರು ಹಳ್ಳಿಗಳಿಗೆ ಬರುವುದಕ್ಕೆ ತಯಾರಾಗಿರುವುದಿಲ್ಲ. ನನ್ನ ನೇಟೀವ್ ವಿಲೇಜ್‌ಗೆ ಡಾಕ್ಟರ್‌ನ್ನು ಪೋಸ್ಟಿಂಗ್ ಮಾಡಿ ಎಂದು ಇದುವರೆಗೆ 20 ಸಲ ಕೇಳಿದ್ದೇನೆ. ಆ ಆಸ್ಪತ್ರೆಗೆ ಇವೊತ್ತಿಗೂ ಡಾಕ್ಟರ್ ಬರಲೇ ಇಲ್ಲ. ಹೀಗಾದರೆ ನಾನು ಯಾರಲ್ಲಿ ಹೇಳಿಕೊಳ್ಳಬೇಕು?

DR.H.C.MAHADEVAPPA:- I am sorry, Sir.

MR.SPEAKER:- Idon't understand. ನೀವು ರಿವ್ಯೂ ಮಾಡುತ್ತೀರೋ ಇಲ್ಲವೋ? ನಿಮ್ಮ ಡೆಪ್ಯುಟಿ ಕಮೀಶನರ್ಸ್ ಏನು ಮಾಡುತ್ತಿದ್ದಾರೆ? How many applications are there before them? If those students are from urban and if they are not willing to come and work in the rural areas, don't call them for interview at all. Call those students who have graduated from the medical colleges and who are willing to come and work. ನಾನು ತಾವುಗಳೆಲ್ಲರೂ ಯುವಕರಾಗಿರುವುದರಿಂದ ನಿಮ್ಮ ಮಿನಿಸ್ಟ್ರಿಯು ಬಹಳ ಡೈನಾಮಿಕ್ ಆಗಿ ಕೆಲಸ ಮಾಡುತ್ತದೆಂದು ನಿರೀಕ್ಷಿಸಿದ್ದೆವು. There should be a visible change seen, during your leadership in the Ministry. Don't just supply this information given to you

by your officers.

ಶ್ರೀ ಹೆಚ್.ಸಿ.ಮಹದೇವಪ್ಪ:- ಮಾನ್ಯ ಸಭಾಧ್ಯಕ್ಷರಲ್ಲಿ ನನ್ನ ಪ್ರಾರ್ಥನೆ. ಈ ಬಗ್ಗೆ ನಾನು ಪ್ರಾಮಾಣಿಕವಾದಂಥ ಪ್ರಯತ್ನಗಳನ್ನು ಮಾಡುತ್ತೇನೆ. ನನಗೆ ಇನ್ನೂ ಸ್ವಲ್ಪ ಸಮಯಾವಕಾಶ ಕೊಡಿ. ಆಗಲಿಲ್ಲ ಅಂದರೆ ನನ್ನ ಮಂತ್ರಿಪದವಿಯನ್ನು ಬಿಟ್ಟುಬಿಡುತ್ತೇನೆ.

ಅಧ್ಯಕ್ಷರು:- ನೀವು ಮಾಡುತ್ತೀರಿ ಎಂಬ ವಿಶ್ವಾಸ ನನಗೆ ನಿಮ್ಮ ಮೇಲೆ ಇದೆ.

ಶ್ರೀ ಹೆಚ್.ಸಿ.ಮಹದೇವಪ್ಪ:- My submission is ನನ್ನ ಕೈಯಲ್ಲಿ ಮಾಡಲಿಕ್ಕೆ ಆಗಲಿಲ್ಲವೆಂದರೆ I am prepared to step down.

MR.SPEAKER:- I welcome this. You should take it up as a challenge. you are a young man. There should be some qualitative difference. This is the Department which concerns the common man. Monied people will go to Mallya and Wokhards. It is the concern of the common man whose representatives we are, and with whose blessings you have entered this House. Otherwise can you even imagin to come to the steps of Vidhana Soudha but for that common man?

DR.H.C.MAHADEVA:- If I cannot do this, I am prepared to step down.

MR.SPEAKER:- I welcome this. I wish you all the best. Please take up this matter seriously.

DR.H.C.MAHADEVAPP:- I will try sincerely.

ವಿಷಯ:- ಹುಬ್ಬಳ್ಳಿಯಲ್ಲಿ ಸರ್ಕಾರಿ ಮಹಿಳಾ ಮಹಾವಿದ್ಯಾಲಯ ಸ್ಥಾಪನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 129 (902)

ಶ್ರೀ ಅಶೋಕ ಎಸ್.ಕಾಟವೇ (ಹುಬ್ಬಳ್ಳಿ ನಗರ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ 2ನೇ ಬೃಹತ್ ನಗರವಾದ ಹುಬ್ಬಳ್ಳಿಯಲ್ಲಿ ಸರ್ಕಾರಿ ಮಹಿಳಾ ಮಹಾವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?